“ಎಷ್ಟು ಸುಂದರವಾಗಿರೋ ಕಣ್ಣುಗಳು! ಅವನ್ನು ಹೇಗೆ ನೋಡದಿರೋಕಾಗುತ್ತೆ?'' ಎಂದು ಅಶ್ವಿನ್ ಹೇಳಿದ. ರೈನಾ ಮಿಸ್ ಅವರ ಕಣ್ಣುಗಳಲ್ಲಿ ಅಬ್ಬಾ... ಎಷ್ಟು ಪ್ರೀತಿ! ಎಷ್ಟು ಬೆಳಕು! ಪ್ರತೀ ಸಲ ನೋಡಿದಾಗಲೂ ಬಂಗಾರದ ಹನಿಗಳನ್ನು ಸಿಂಪಡಿಸುವ ತರಹದ ನೋಟವಿತ್ತು!

''ನಾನು ನೋಡಲ್ಲ'' ಅಲಿ ಹೇಳಿದ. ''ನಾವು ಅಫ್ಘಾನಿಗಳು ಬೇರೊಬ್ಬ ಹೆಣ್ಣಿನ ಕಣ್ಣುಗಳನ್ನು ನೋಡೋ ಹಾಗಿಲ್ಲ. ಅದು ನಮ್ಮ ಮಿಸ್ ಆದ್ರೂ ಸರಿ...''

ಬದಿಯ ಬೆಂಚಿನಲ್ಲಿ ತಲೆತಗ್ಗಿಸಿ ಕುಳಿತಿದ್ದ ಷಾದಿ ಅದನ್ನು ಬೆಂಬಲಿಸುವ ರೀತಿಯಲ್ಲಿ ಕಣ್ಣುಗಳನ್ನೆತ್ತಿದ.

''ಹೌದಾ? ನೀನೊಬ್ಬ ದೊಡ್ಡ ಗಂಡಸು!'' ನಕ್ಕು ಹೇಳಿದ ಅಶ್ವಿನ್ ಅಂದ, ''ಆದ್ರೆ ನಮ್ಮೂರಲ್ಲಿ ಹಾಗೇನೂ ಇಲ್ಲ. ಅಲ್ಲಿನ ಹುಡುಗರಿಗೆ ಮಿಸ್ ಮೇಲೆ ಪ್ರೀತಿ ಪ್ರೇಮ ಮೂಡುತ್ತೆ''.

ಅಲಿಯೂ ಷಾದಿಯೂ ನಂಬಲಾರದೆ ಪರಸ್ಪರ ನೋಡಿದರು, ಅದೇನೋ ಪಾಪದ ವಿಚಾರ ಕೇಳಿದಂತೆ. ಅವರ ಮಧ್ಯದಿಂದ ಒಂದು ತುಂಟ ನಗೆಯೊಂದಿಗೆ ಅಶ್ವಿನ್ ಎದ್ದುಹೋದ.

ಅಲಿ ಮತ್ತು ಷಾದಿ ಶಾಲೆಗೆ ಹೊಸದಾಗಿ ಬಂದು ಸೇರಿದ ಅಫ್ಘಾನಿ ವಿದ್ಯಾರ್ಥಿಗಳಾಗಿದ್ದರು. ಹದಿನೆಂಟೋ ಹತ್ತೊಂಬತ್ತೋ ವಯಸ್ಸಾಗಿದ್ದರೂ ಅವರಿಗೆ ಅಡ್ಮಿಷನ್ ಸಿಕ್ಕಿದ್ದು ಎಂಟನೇ ತರಗತಿಗೆ. ಅವರ ವಿಚಿತ್ರವಾದ, ತಡವರಿಸುವ ಇಂಗ್ಲಿಷ್ ಕೇಳಿ ಕ್ಲಾಸಿನ ಮಕ್ಕಳು ನಕ್ಕಿದ್ದರು. ಚಿತ್ರಗಳಾಗಿ, ಚಿಹ್ನೆಗಳಾಗಿ ಅವರು ನೋಟ್‌ಬುಕ್ಕಿನಲ್ಲಿ ಗೀಚಿದ ಅಕ್ಷರಗಳು ಅಧ್ಯಾಪಕರನ್ನು ತಬ್ಬಿಬ್ಬು ಮಾಡುತ್ತಿದ್ದವು.

ಅಲಿ ಮತ್ತು ಷಾದಿಯ ಅಪ್ಪಂದಿರಿಗೆ ಅವರನ್ನು ಚಿಕ್ಕಂದಿನಲ್ಲೇ ಶಾಲೆಗೆ ಕಳುಹಿಸುವಷ್ಟು ಹಣವಿರಲಿಲ್ಲ. ಅಫ್ಘಾನಿಸ್ತಾನ ಬಿಟ್ಟು ಬೇರೊಂದು ದೇಶಕ್ಕೆ ಬಂದ ನಂತರ, ಒಂದು ಹಳೆಯ ರತ್ನಗಂಬಳಿ ಅಂಗಡಿಯಲ್ಲಿ ಕೆಲಸ ಹಿಡಿದು ಹಾಗೂ ಹೀಗೂ ಹೆಣಗಾಡಿ ಮುಂದೆ ಹೋಗುವಾಗ ಅವರಿಗೆ ಅದರ ವಿಷಯ ನೆನಪಿರಲಿಲ್ಲ ಎಂಬುದೇ ಸತ್ಯವಿತ್ತು. ತುಂಬಾ ಚಿಕ್ಕಂದಿನಿಂದಲೇ ಮಕ್ಕಳು ಅದೇ ಅಂಗಡಿಗೆ ಸಹಾಯಕ್ಕೆಂದು ಹೋದರು. ಅಂಗಡಿ ಮುಂದಿನ ಪೆಟ್ರೋಲ್ ಪಂಪಿನಲ್ಲಿ ಪಾರ್ಟ್ ಟೈಂ ಕೆಲಸ ಮಾಡುವ ಒಬ್ಬ ವಯಸ್ಸಾದ ಬಂಗಾಳಿಯಿಂದ ಅಲ್ಪ ಸ್ವಲ್ಪ ಇಂಗ್ಲಿಷ್ ಕಲಿತರು.

(ಟ್ಯೂಷನ್ ಫೀ ತಪ್ಪದೇ ತೆಗೆದುಕೊಂಡರೂ ಆಂಗ್ಲ ಭಾಷೆಯ ಹೆಸರಲ್ಲಿ ಆತ ತಮಗೆ ಹೇಳಿಕೊಟ್ಟದ್ದು ಯಾವುದೋ ಆದಿವಾಸಿ ಭಾಷೆಯ ಲಿಪಿಗಳು ಮತ್ತು ವಾಕ್ಯಗಳಾಗಿದ್ದವು ಎಂದು ಅಲಿಯೂ ಷಾದಿಯೂ ನಂತರ ಗೊತ್ತುಮಾಡಿಕೊಂಡರು. ಬಂಗಾಳಿ ಚಾಚಾನನ್ನು ಅಲ್ಲಾ ಕಾಪಾಡಲಿ ಎಂದು ಪ್ರಾಮಾಣಿಕವಾಗಿ ಮನಸ್ಸಿನಲ್ಲಿ ಪ್ರಾರ್ಥಿಸಿದರು ಕೂಡ).

ಅವರ ಸಣ್ಣ ಪೇಟೆಯಲ್ಲಿ ಇದ್ದದ್ದು ಒಂದೇ ಒಂದು ಸ್ಕೂಲ್. ರತ್ನಗಂಬಳಿ ಅಂಗಡಿಯ ಮುಂದಿನಿಂದ ದಿನವೂ ಸ್ಕೂಲಿನ ಬಸ್ ಕುಪ್ಪಳಿಸಿಕೊಂಡು ಹೋಗುತ್ತಿತ್ತು. ಅದರೊಳಗಿಂದ ನೀರಹನಿಗಳಂತೆ ಹೊರಚಿಮ್ಮುತ್ತಿದ್ದ ಜೀವದ ಉನ್ಮಾದ ಕಣಗಳು ಅಲಿಯ ಚಡಪಡಿಕೆಯನ್ನು ಹೆಚ್ಚಿಸುತ್ತಿದ್ದವು. ಬಸ್ಸು ದಿನವೂ ಹಾದುಹೋಗುವಾಗ ಅವನು ಏರಿದ ಎದೆಬಡಿತದೊಂದಿಗೆ ಅದನ್ನು ನೋಡದಿರಲು ಪ್ರಯತ್ನಿಸಿದ. ಕೊನೆಗೊಂದು ದಿನ ಸೋತು, ಅವನು ತನ್ನ ಅಪ್ಪನೊಡನೆ ತನಗೆ ಶಾಲೆಗೆ ಸೇರಿ ಕಲಿಯಬೇಕೆಂದಿದೆ ಎಂದ. ಅಲಿ ಮತ್ತು ಷಾದಿಯ ತಂದೆಯರು ಮುಖಮುಖ ನೋಡಿದರು. ಸೋತುಹೋದ ಒಂದು ಊರಿನ ನೆರಳನ್ನು ಅವರು ತಮ್ಮ ಕಣ್ಣುಗಳಲ್ಲಿ ಸನಿಹದಿಂದ ಕಂಡಿರಬೇಕು. ಅಲಿಯ ಮುಂದೆ ''ಸರಿ'' ಎಂದು ಮೆಲ್ಲಗೆ ತಲೆಯಾಡಿಸಿ ಅವರಿಬ್ಬರೂ ಮಾಡುತ್ತಿದ್ದ ಕೆಲಸಗಳಿಗೆ ಸದ್ದಿಲ್ಲದೆ ಹಿಂದಿರುಗಿದರು.

ಶಾಲೆಯ ಮೊದಲ ದಿನಗಳು ಅಹಿತಕರವಾಗಿದ್ದವು. ವಿವಿಧ ದೇಶಗಳ ವಿದ್ಯಾರ್ಥಿ ಸಮೂಹ,